# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 24/06/2022 ರಂದು ಬೆಳಿಗ್ಗೆ 11-00 ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ಸಂಖ್ಯೆ:49 ಲಿಂಗರಾಜಪುರಕ್ಕೆ ಸಂಬಂಧಿಸಿದ ಸಭೆಯ ನಡಾವಳಿಗಳು

### ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು ಹಾಗೂ ಅಧಿಕಾರಿಗಳು.

| ಹಾಜರಾಗಿದ್ದ ಅಧಿಕಾರಿಗಳು | ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು |
|---|---|
| 1. ಶ್ರೀ ಕೆ.ಚಂದ್ರಶೇಕರ್ (ಕಂದಾಯ ಅಧಿಕಾರಿ ಮಹದೇವಪುರ) ನೋಡಲ್ ಅಧಿಕಾರಿ – ಅಧ್ಯಕ್ಷರು<br>2. ಶ್ರೀ.ಹೆಚ್.ವಿ.ಕೃಷ್ಣಾರೆಡ್ಡಿ, ಕಾರ್ಯದರ್ಶಿ<br>3. ಡಾ॥ ವೆಂಕಟೇಶ್ ಆರ್, ವಾರ್ಡ್ 49, ಆರೋಗ್ಯಾಧಿಕಾರಿ<br>4. ಶ್ರೀ ಕೃಷ್ಣಮೂರ್ತಿ, ಕಂದಾಯ ಪರಿವೀಕ್ಷಕರು<br>5. ಪೂಜಾ ಎಂ, ಸಹಾಯಕ ಅಭಿಯಂತರರು<br>6. ಮೊಹಮದ್ ರಹಮತುಲ್ಲಾ, ಕೆಲಸ ಪರಿವೀಕ್ಷಕರು<br>7. ರಜಿನಿ ಎ, ಬಿಡಬ್ಲ್ಯೂಎಸ್ಎಸ್ಬಿ, ಸಹಾಯಕ ಅಭಿಯಂತರರು | 1. ಪಿ.ಜಯಶೀಲನ್ ಕೆ.ಎಸ್.ಎಫ್.ಸಿ<br>2. ಪಿ.ಕೃಷ್ಣಪ್ಪ LNKS |

****

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ.49 ರ ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕರನ್ನು ಸ್ವಾಗತಿಸುತ್ತಾ ಈ ಕೆಳಕಂಡಂತೆ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

**ಕಾಮಗಾರಿ ಇಲಾಖೆ:-**ಸದರಿ ವಾರ್ಡ್‌ನ ಒಟ್ಟು 64 ರಸ್ತೆಗಳ ಪೈಕಿ 40 ರಸ್ತೆಗಳ ಡಾಂಬರೀಕರಣ ಕಾರ್ಯ ಪೂರ್ಣಗೊಂಡಿದ್ದು, ಇನ್ನು 15 ದಿನಗಳಲ್ಲಿ ಎಲ್ಲಾ ರಸ್ತೆಗಳಿಗೂ ಡಾಂಬರೀಕರಣ ಮಾಡಲಾಗುವುದು ಎಂಬುದಾಗಿ ವಾರ್ಡ್‌ನ ಸಹಾಯಕ ಇಂಜಿನಿಯರ್ ಮಾಹಿತಿ ನೀಡಿದರು. ಹಂಪ್ಸ್‌ಗಳನ್ನು ಹಾಕಲಾಗುತ್ತಿಲ್ಲ, ಈಗಾಗಲೇ ಇರುವ ಹಂಪ್‌ಗಳನ್ನು ಹಾಗೆಯೇ ಮುಂದುವರೆಸಿದೆ ಡಾಂಬರೀಕರಣದ ಗುತ್ತಿಗೆದಾರರು ವಾರ್ಡ್ ಇಂಜಿನಿಯರ್ ಸಿಬ್ಬಂದಿಗಳ ಜೊತೆ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸುತ್ತಿದ್ದು, ಡಾಂಬರೀಕರಣ ವೇಳೆ ವಾರ್ಡ್ ಇಂಜಿನಿಯರ್ ರವರು ಮೇಲುಸ್ತುವಾರಿ ಮಾಡುತ್ತಿದ್ದು ಡಾಂಬರೀಕರಣ ಕೆಲಸ ಬೇಗನೇ ಆಗುತ್ತಿದೆ ಎಂದು ಸಮಿತಿ ಸದಸ್ಯರು ತಿಳಿಸಿದರು.

**ಬಿಡಬ್ಲ್ಯೂಎಸ್ಎಸ್ಬಿ:-** ಒಂದು ತಿಂಗಳಿಂದ ವಾರಕ್ಕೆ 2 ಬಾರಿ ಮಾತ್ರ ನೀರು ಬಿಡುತ್ತಿದ್ದಾರೆ. ಈ ಹಿಂದೆ ವಾರಕ್ಕೆ ಮೂರು ಬಾರಿ ಬಿಡುತ್ತಿದ್ದರು ನೀರು ನಿಧಾನಗತಿಯಲ್ಲಿ ಬರುತ್ತಿದೆ ಎಂದು ಸಮಿತಿ ಸದಸ್ಯರು ತಿಳಿಸಿದರು. ಬೇರೆ ಕಡೆಯಿಂದ ಬರುವ ನೀರಿನ ಹಂಚಿಕೆ ಕಡಿಮೆ ಇದೆ ಇದನ್ನು ಹಂಚಲಾಗುತ್ತಿದೆ ಎಂಬುದಾಗಿ BWSSB ಸಹಾಯಕ ಅಭಿಯಂತರರು ತಿಳಿಸಿದರು ವಾಡ್ 49 ಕ್ಕೆ ಪ್ರತ್ಯೇಕ ವಾಟರ್ ಟ್ಯಾಂಕ್ ಇರುವುದಿಲ್ಲ ಬೇರೆ ಕಡೆಯಿಂದ ನೀರನ್ನು ಹಂಚಿಕೆ ಮಾಡುತ್ತಿದ್ದಾರೆ ಈ ಹಿಂದೆ ನೀರಿನ ಸಮಸ್ಯೆ ಇರಲಿಲ್ಲ ಈಗ ಸಮಸ್ಯೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು ಈ ಬಗ್ಗೆ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಲು ಸೂಚಿಸಲಾಯಿತು.

ಪು.ತಿ.ನೋ

**ಬೆಸ್ಕಾಂ:-** ಬೆಸ್ಕಾಂ ಸಹಾಯಕ ಅಭಿಯಂತರರು ಗೈರು ಹಾಜರಾಗಿರುತ್ತಾರೆ.

**ಬೀದಿ ದೀಪಗಳ ನಿರ್ವಹಣೆ:-** ಬೀದಿ ದೀಪಗಳ ನಿರ್ವಹಣೆಯನ್ನು ಸರಿಯಾಗಿ ಇತ್ಯರ್ಥಪಡಿಸುತ್ತಿಲ್ಲ ದೂರನ್ನು ನೀಡಿ 10 ದಿನಗಳಾದರೂ ಕ್ರಮ ಕೈಗೊಂಡಿರುವುದಿಲ್ಲ ಎಂದು ಸಮಿತಿ ಸದಸ್ಯರು ತಿಳಿಸಿದರು ಇದಕ್ಕೆ ಬೀದಿ ದೀಪಗಳ ನಿರ್ವಹಣೆಯ ಗುತ್ತಿಗೆದಾರರು ಮತ್ತು ಸಹಾಯಕ ಅಭಿಯಂತರರನ್ನು ದೂರವಾಣಿ ಮೂಲಕ ಸಂಪರ್ಕಿಸಲು ಸೂಚಿಸಲಾಯಿತು. ಎಲ್ಲಾ ಕಡೆ ರಸ್ತೆ, ಬೀದಿ ದೀಪಗಳು ಉರಿಯುತ್ತಿರುತ್ತವೆ ಎಂಬುದಾಗಿ ಸಮಿತಿ ಸದಸ್ಯರು ತಿಳಿಸಿದರು.

**ಘನತ್ಯಾಜ್ಯ ವಿಲೇವಾರಿ:-** ಘನತ್ಯಾಜ್ಯ ವಿಲೇವಾರಿ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ ಕಿರಿಯ ಆರೋಗ್ಯ ನಿರೀಕ್ಷಕರು ಮತ್ತು ಹಿರಿಯ ಆರೋಗ್ಯ ನಿರೀಕ್ಷಕರು ಗೈರು ಹಾಜರಾಗಿರುತ್ತಾರೆ.

**ಆರೋಗ್ಯ:-** ಕೋವಿಡ್-19 ಪ್ರಕರಣಗಳು ಹೆಚ್ಚಾಗುತ್ತಿದ್ದು, ಸಕ್ರೀಯ ಪ್ರಕರಣಗಳು-02 ಇರುತ್ತದೆ, ಡೆಂಗ್ಯೂ ಪ್ರಕರಣಗಳು ಯಾವುದೂ ವರದಿಯಾಗಿರುವುದಿಲ್ಲ, ಔಷಧಿಗಳನ್ನು ಸಿಂಪಡಿಸಲಾಗುತ್ತಿದೆ. ಫಾಗಿಂಗ್ ಮಾಡಿರುವುದಿಲ್ಲ, ಔಷಧಿಗಳ ಕೊರತೆ ಇರುವುದಿಲ್ಲ. ಕಣ್ಣಿನ ಪೊರೆ ಚಿಕಿತ್ಸೆಗೆ ಬೋರಿಂಗ್ ಆಸ್ಪತ್ರೆಗೆ ಕಳುಹಿಸಲಾಗುತ್ತಿದೆ, ಎಲ್ಲಾ ಶಾಲಾ ಕಾಲೇಜುಗಳಿಗೂ ಭೇಟಿ ನೀಡಿ ವ್ಯಾಕ್ಸಿನೇಷನ್ ಹಾಕಲಾಗುತ್ತಿದೆ ಎಂಬುದಾಗಿ ಡಾ॥ ವೆಂಕಟೇಶ್ ಸಭೆಗೆ ಮಾಹಿತಿ ನೀಡಿದರು.

ಮುಂಬರುವ ಬಿಬಿಎಂಪಿ ಚುನಾವಣೆಗೆ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲು ಮತದಾರರ ಪಟ್ಟಿಯೊಂದಿಗೆ ಆಧಾರ್ ನಂಬರ್ ಲಿಂಕ್ ಮಾಡುವ ಕಾರ್ಯ, ಮತಗಟ್ಟೆಗಳ ಪರಿಶೀಲನೆ, ವಾರ್ಡ್ ಬೌಂಡರಿಗೆ ಅನುಗುಣವಾಗಿ ಮತಗಟ್ಟೆಗಳನ್ನು ಸ್ಥಾಪಿಸುವುದು ಮುಂತಾ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಮುನಿತಾಯಪ್ಪ ಬಡಾವಣೆಯ ಕ್ರಾಸ್‌ಗಳಿಗೆ ಎರಡೆರಡು ಅಡ್ರಸ್ ಬೋರ್ಡ್‌ಗಳಿವೆ ಸಾರ್ವಜನಿಕರಿಗೆ ಗೊಂದಲ ಉಂಟಾಗುತ್ತಿದೆ ಒಂದೇ ರಸ್ತೆಗೆ ಎರಡು ಕ್ರಾಸ್ ಬೋರ್ಡ್ ಇದೆ ಇದನ್ನು ಪರಿಶೀಲಿಸಿ ಸರಿಪಡಿಸುವುದು ಎಂಬುದಾಗಿ ವಾರ್ಡ್ ಇಂಜಿನಿಯರ್‌ಗೆ ತಿಳಿಸಲಾಯಿತು.

ಸಭೆಯು 12-00 ಗಂಟೆಗೆ ನೋಡಲ್ ಅಧಿಕಾರಿಗಳ ಹಾಗೂ ಸಮಿತಿ ಸದಸ್ಯರ ಒಮ್ಮತದ ತೀರ್ಮಾನದಂತೆ ವಂದನಾರ್ಪಣೆಯೊಂದಿಗೆ ಮುಕ್ತಾಯಗೊಂಡಿತು.

24-06-22

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

-sd-
ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-49 ಲಿಂಗರಾಜಪುರ

ಪ್ರತಿಯನ್ನು:-

1. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
2. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
3. ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಟ್ರಾಫೀಕ್ ಪೊಲೀಸ್ ಠಾಣೆ ಬಾಣಸವಾಡಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಆರೋಗ್ಯ ವೈದ್ಯಾಧಿಕಾರಿಗಳು, ಸರ್ವಜ್ಞನಗರ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
5. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮಾರುತಿ ಸೇವಾನಗರ ರವರ ಮಾಹಿತಿಗಾಗಿ ರವಾನಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾರುತಿಸೇವಾನಗರ ವಿಭಾಗ ರವರ ಮಾಹಿತಿಗಾಗಿ ರವಾನಿಸಿದೆ.
7. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬಿಡಬ್ಲ್ಯೂಎಸ್‌ಎಸ್‌ಬಿ ರವರ ಅವಗಾಹನೆಗೆ ರವಾನಿಸಿದೆ.
8. ಸಂಬಂಧಪಟ್ಟ ಅಧಿಕಾರಿಗಳಿಗೆ ಹಾಗೂ ಮುಂದಿನ ಕ್ರಮಕ್ಕಾಗಿ.